# ಕರ್ನಾಟಕ ಸರ್ಕಾರ
## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ: ಟಿಸಿಎನ್/11/2018-19 ದಿನಾಂಕ:21 -05-2019

**ಅಧಿಕೃತ ಜ್ಞಾಪನಾ ಪತ್ರ**

ವಿಷಯ:- ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:09-02-2017 ರ ತೀರ್ಪಿನ ಸಿವಿಲ್ ಅಪೀಲ್ ಸಂಖ್ಯೆ : 2368/2011 ಪ್ರಕರಣದ ಹಿನ್ನೆಲೆಯಲ್ಲಿ ಹಿರಿಯ ನೇತ್ರಾಧಿಕಾರಿಗಳ ಹುದ್ದೆಗೆ ಹಿಂಬಡ್ತಿಗೊಳಗಾದ ಸಿಬ್ಬಂದಿಗಳಿಗೆ ಮುಖ್ಯ ನೇತ್ರಾಧಿಕಾರಿಗಳ ಹುದ್ದೆಯಲ್ಲಿ ಮುಂದುವರೆಸಿ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ:-
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಫೀಲು ಸಂಖ್ಯೆ: 2368/2011-ಬಿ.ಕೆ.ಪವಿತ್ರ ಮತ್ತಿತರರು ವಿರುದ್ಧ-ಯೂನಿಯನ್ ಆಫ್ ಇಂಡಿಯಾ ಮತ್ತು ಸಂಬಂದಿಸಿದ ಇತರ ಪ್ರಕರಣಗಳಲ್ಲಿ ದಿ: 09-02-2017 ರಂದು ನೀಡಿದ ತೀರ್ಪು.
2. ಸರ್ಕಾರದ ಸುತ್ತೋಲೆ ಸಂ: ಸಿಆಸುಇ/639/ಸೇನೆನಿ/2017 ದಿ: 27-03-2018 ಮತ್ತು 04-04-2018
3. ಆಯುಕ್ತಾಲಯದ ಅ.ಜ್ಞಾಪತ್ರ ಸಂ: ಟಿಸಿಎನ್/11/2018-19 ದಿನಾಂಕ: 17-04-2018 (ಅನುಭಂದ-1)
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 27-02-2019
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 05-03-2019
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ/186/ಎಸ್ಆರ್ಎಸ್/2018 ಬೆಂಗಳೂರು ದಿ: 15-05-2019

******

ಮೇಲೆ ಓದಲಾದ ಉಲ್ಲೇಖ(1) ರಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ: 2368/2011 ಕುರಿತಂತೆ ದಿ: 09-02-2017 ರಂದು ನೀಡಿರುವ ತೀರ್ಪಿನ ಅನ್ವಯ ಹಾಗೂ ಉಲ್ಲೇಖ (2) ರಲ್ಲಿನ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳನ್ವಯ ಪರಿಷ್ಕರಿಸಲಾದ ಜ್ಯೇಷ್ಠತಾ ಪಟ್ಟಿಯನ್ನಾದರಿಸಿ ಆಯುಕ್ತಾಲಯದ ಉಲ್ಲೇಖ (3) ರ ಅ.ಜ್ಞಾ ಪತ್ರದಲ್ಲಿ ಮುಖ್ಯ ನೇತ್ರಾಧಿಕಾರಿಗಳ ಹುದ್ದೆಯಿಂದ ಹಿರಿಯ ನೇತ್ರಾಧಿಕಾರಿಗಳ ಹುದ್ದೆಗೆ ಇಳಿಸಿ ಹಿಂಬಡ್ತಿ ಆದೇಶ ಹೊರಡಿಸಲಾಗಿತ್ತು

ಉಲ್ಲೇಖ (4) ರಲ್ಲಿನ ಸರ್ಕಾರದ ಆದೇಶ ದಿ: 27-02-2019 ರನ್ವಯ ಹಿಂಬಡ್ತಿಗೆ ಒಳಗಾದ ಅಧಿಕಾರಿ/ನೌಕರರನ್ನು ಅವರು ಹಿಂದೆ ಧಾರಣ ಮಾಡಿದ ವೃಂದಗಳಿಗೆ ಮರು ನಿಯುಕ್ತಿಗೊಳಿಸಲು ಹಾಗೂ ಅವರಿಗೆ ಅರ್ಹತಾ ದಿನಾಂಕವನ್ನು ನೀಡಿ ಅಂತಹ ಅರ್ಹತಾ ದಿನಾಂಕದ ಆಧಾರದ ಮೇಲೆ ಕೆಳ ಹಂತದ ವೃಂದಕ್ಕೆ ಹಿಂಬಡ್ತಿಗೊಳಿಸಿದ್ದಲ್ಲಿ ಅಂತಹ ಸರ್ಕಾರಿ ನೌಕರರನ್ನು ಅವರು ಹಿಂಬಡ್ತಿ ಹೊಂದಿದ ನಿಕಟ ಪೂರ್ವದಲ್ಲಿ ಧಾರಣ ಮಾಡಿದ್ದ ವೃಂದಕ್ಕೆ ಹಿಂಬಡ್ತಿ ಹೊಂದಿದ ದಿನಾಂಕದಿಂದಲೇ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಮರು ಸ್ಥಳ ನಿಯುಕ್ತಿಗೊಳಿಸುವಂತೆ ಹಾಗೂ ಅವರು ಕೆಳ ಹಂತದ ವೃಂದಗಳಿಗೆ ಹಿಂಬಡ್ತಿಗೊಳ್ಳುವ ಪೂರ್ವದ ವೃಂದದ ವೇತನ ಶ್ರೇಣಿಯಲ್ಲಿ ಮತ್ತು ವೇತನದ ಅದೇ ಹಂತದಲ್ಲಿ ಅವರು ವೇತನವನ್ನು ಪಡೆಯುವುದನ್ನು ಮುಂದುವರಿಸತಕ್ಕದ್ದು ಎಂದು ಆದೇಶಿಸಲಾಗಿದೆ.

...2

ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಹಿರಿಯ ಫಾರ್ಮಾಸಿಸ್ಟ್ ವೃಂದದ ಹುದ್ದೆಗಳು ಖಾಲಿ ಇರುವುದರಿಂದ, "ಸೂಪರ್ ನ್ಯೂಮರಿ" ಹುದ್ದೆಗಳನ್ನು ಸೃಜಿಸುವ ಅವಶ್ಯಕತೆ ಕಂಡುಬರುವುದಿಲ್ಲ.

ಈ ಮೇಲಿನ ಅಂಶಗಳನ್ನು ಪರಿಶೀಲನೆ ಮಾಡಿಕೊಂಡು ಮೇಲೆ ಓದಲಾದ ಉಲ್ಲೇಖ (6) ರಲ್ಲಿ ನೀಡಲಾದ ಮಾರ್ಗಸೂಚಿಯಂತೆ ಹಿರಿಯ ನೇತ್ರಾಧಿಕಾರಿಗಳ ಹುದ್ದೆಗೆ ಹಿಂಬಡ್ತಿಗೊಳಗಾಗಿದ್ದ ನೌಕರರುಗಳಿಗೆ ಹಿಂಬಡ್ತಿಗೊಳಗಾಗುವ ನಿಕಟ ಪೂರ್ವದಲ್ಲಿ ಹೊಂದಿದ್ದ ಮುಖ್ಯ ನೇತ್ರಾಧಿಕಾರಿಗಳ ಹುದ್ದೆಗೆ ಮತ್ತು ಅದೇ ವೇತನ ಶ್ರೇಣಿಯಲ್ಲಿ ಪೂರ್ವಾನ್ವಯವಾಗುವಂತೆ ಮುಂದುವರೆಸಿ ಅವರುಗಳ ಹೆಸರಿನ ಮುಂದೆ ನಮೂದಿಸಿರುವ ಖಾಲಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಲು ಆದೇಶಿಸಿದೆ.

| ಕ್ರಮ ಸಂ | ನೌಕರರ ಹೆಸರು ಹಾಗೂ ಹಿಂಬಡ್ತಿಗೊಳ್ಳುವ ಪೂರ್ವ ಕಾರ್ಯನಿರ್ವಹಿಸುತ್ತಿದ್ದ ಸ್ಥಳ | ಪ್ರಸ್ತುತ ಹಿರಿಯ ನೇತ್ರಾಧಿಕಾರಿಗಳಾಗಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮುಖ್ಯ ನೇತ್ರಾಧಿಕಾರಿಗಳ ಹುದ್ದೆಯಲ್ಲಿ ನಿಯುಕ್ತಿಗೊಳಿಸಿದ ಸ್ಥಳ | ಷರಾ |
|---|---|---|---|---|
| 01 | ಕೆ. ವೆಂಕಟೇಶಯ್ಯ ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು. | ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು | ಮಿಂಟೋ ಕಣ್ಣಾಸ್ಪತ್ರೆ, ಬೆಂಗಳೂರು. | |
| 02 | ವಿ.ಬಿ. ಮಲ್ಲಿಕಾರ್ಜುನಯ್ಯ ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು. | ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು. (ಸಾಮಾಜಿಕ ಕಾರ್ಯಕರ್ತರ ಎದುರು ಹುದ್ದೆಗೆ) | ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು. | |

ಮೇಲ್ಕಂಡ ಆದೇಶವು ಜ್ಯೇಷ್ಠತೆ ಮತ್ತು ಸಮೀಕ್ಷೆಗೆ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡುವ ತೀರ್ಪು/ ಆದೇಶಕ್ಕೆ ಒಳಪಟ್ಟಿರುತ್ತದೆ.

ಲೋಕಸಭಾ ಸಾರ್ವತ್ರಿಕ ಚುನವಣಾ ಕಾರ್ಯಕ್ಕೆ ನಿಯೋಜಿತವಾಗಿರುವ ಅಧಿಕಾರಿ/ನೌಕರರು ಸದರಿ ಚುನವಣಾ ಮಾದರಿ ನೀತಿ ಸಂಹಿತೆ ಅವಧಿ ಪೂರ್ಣಗೊಂಡ ನಂತರ ನೇಮಕ ಮಾಡಿರುವ ಸ್ಥಳಕ್ಕೆ ಕೂಡಲೇ ವರದಿ ಮಾಡಿಕೊಳ್ಳತಕ್ಕದ್ದು ಮತ್ತು ವರದಿ ಮಾಡಿಕೊಂಡ ಬಗ್ಗೆ ನಿರ್ದೇಶನಾಲಯಕ್ಕೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ವಿಕಾಸ ಸೌಧ, ಬೆಂಗಳೂರು
2. ವೈದ್ಯಕೀಯ ಅಧೀಕ್ಷಕರು, ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು/ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು.
3. ಡೀನ್ ಮತ್ತು ನಿರ್ದೇಶಕರು, ಮಿಂಟೋ ಕಣ್ಣಾಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
4. ಸಂಬಂಧಪಟ್ಟ ನೌಕರರಿಗೆ
5. ಕಛೇರಿ ಪ್ರತಿ.